**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>**

**<u>ಸಿ.ಸಿ. ನಂ. 2459/2025</u>**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮಹೇಶ | ಸಿ.ಡಬ್ಲ್ಯೂ-06 |
| ತಂದೆಯ ಹೆಸರು | : | ಪೆನ್ನಯ್ಯ | ಪಿ.ಡಬ್ಲ್ಯೂ-08 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಅಡುಗೆ ಕೆಲಸ | |
| ವಾಸಸ್ಥಳ | : | ಬಿ ಜಿ ಕೆರೆ | ದಿಃ 25-02-2026. |

**<u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>**

ಆರೋಪಿ  ನನಗೆ ಗೊತ್ತು .

ದಿನಾಂಕ 05.10.2025 ರಂದು ಐ ಸ್ಮಾರ್ಟ್  ಬೈಕನ್ನು ತಂದು ಪೊಲೀಸರಿಗೆ ಹಜರು ಪಡಿಸಿರುತ್ತೇನೆ.  ಸದರಿ ಬೈಕನ್ನು  9 ನೇ ತಿಂಗಳಿನಲ್ಲಿ ಆರೋಪಿಯು ನೀಡಿರುತ್ತಾರೆ.  ಆರೋಪಿಯು ನಮ್ಮ ಮನೆಯವರಿಗೆ ಹುಷಾರಿಲ್ಲದ ಕಾರಣ ಸದರಿ ಬೈಕನ್ನು ನನಗೆ ನೀಡಿ, 8000/- ರೂ. ಹಣವನ್ನು ಪಡೆದು 3 ದಿನದ ನಂತರ ಬಿಡಿಸಿಕೊಂಡು ಹೋಗುವುದಾಗಿ ಹೇಳಿದ್ದರು.  ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿ ಬೈಕನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ನಿಪಿ.6 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 6(ಡಿ) ಅಂತ ಗುರುತಿಸಲಾಯಿತು.

ಠಾಣೆಯಲ್ಲಿ ಬೈಕನ್ನು ಹಾಜರು ಪಡಿಸಿದಾಗ ಸಮಯ ಸುಮಾರು ಸಂಜೆ 04-00 ಗಂಟೆ ಆಗಿತ್ತು.  ಸಾಕ್ಷಿಯು ನಿಪಿ.4 ಅನ್ನು ನೋಡಿ ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರ ಎಂದು ಗುರುತಿಸಿರುತ್ತಾರೆ.  ನಿಪಿ.4 ರಲ್ಲಿರುವ ವಾಹನವನ್ನು ನೋಡಿ ತಾನು ಆರೋಪಿಯಿಂದ ಪಡೆದ ಬೈಕ್ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ವಿ ಸಿ ಮೂಲಕ ಹಾಜರು ಪಡಿಸಲಾದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ  ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಶ್ರೀಮತಿ  ಬಿ.ಜಿ.,   ಆರೋಪಿ ಪರ ವಕೀಲರಿಂದಃ**

ನಾನು ಅಡುಗೆ ಕೆಲಸ ಮಾಡುತ್ತಿದ್ದೇನೆ. ನಾನು ಚಿತ್ರದುರ್ಗ ಜೋಗಿಮಟ್ಟಿಯಲ್ಲಿ ವಾಸವಾಗಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಬೇಡರರೆಡ್ಡಿಹಳ್ಳಿ ಗ್ರಾಮದಲ್ಲಿ ಆರೋಪಿಯು ನನಗೆ ಬೈಕ್ ನೀಡಿರುತ್ತಾನೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಅಲ್ಲಗಳೆದ ಅಲ್ಲಗಳೆದ ಹೇಳಿಕೆಭಾಗವನ್ನು ನಿಪಿ.10 ಎಂದು ಗುರುತಿಸಲಾಯಿತು.

ನನಗೆ ಕೆಲಸ ಹೇಗೆ ಸಿಗುತ್ತದೋ ಹಾಗೆ ದಿನಕ್ಕೆ 2 ರಿಂದ 3 ಸಾವಿರ ಆದಾಯ ಬರುತ್ತದೆ. ನಾನು ಆರೋಪಿಗೆ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ವಾಹನವನ್ನು ಅಡ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮುಂಚೆ ನನಗೆ ಪರಿಚಯ ಇರುವುದಿಲ್ಲ. ಸಾಮಾನ್ಯವಾಗಿ ಯಾರಾದರೂ ಬಂದು ಹಣನಮ್ಮ ಕೇಳಿದಾಗ ಅವರ ಪೂರ್ವಪರ ವಿಚಾರಿಸುತ್ತೇವೆ ಎಂದರೆ ಸರಿ.  ಆರೋಪಿಗೆ ರೂ. 6000/– ಹಣವನ್ನು ಫೋನ್ ಪೇ ಮೂಲಕ ವರ್ಗಾಯಿಸಿದ್ದು , ರೂ. 2000/– ನಗದು ಹಣ ನೀಡಿರುತ್ತೇನೆ.  ಒಂದು 500/– ರೂ ಮುಖ ಬೆಲೆಯ ನೋಟು ಹಾಗೂ ಉಳಿದ 100/– ಹಾಗೂ 200/– ಮುಖ್ಯ ಬೆಲೆಯ ನೋಟುಗಳನ್ನು ನೀಡಿರುತ್ತೇನೆ. 100/– ಹಾಗೂ 200/– ರೂ. ಮುಖ ಬೆಲೆಯ ಎಷ್ಟು ನೋಟುಗಳನ್ನು ನೀಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ.

ಆರೋಪಿಯು ನನಗೆ ನೀಡಿದ ಬೈಕ್ ನೊಂದಣಿ ಸಂಖ್ಯೆ ಕೆಎ–16 ಇಎ–4880 ಆಗಿರುತ್ತದೆ. ಸಾಮಾನ್ಯವಾಗಿ ವಾಹನಗಳನ್ನು ಪಡೆಯುವಾಗ ದಾಖಲೆಗಳನ್ನು ಪರಿಶೀಲಿಸಿ ಪಡೆಯುತ್ತೇವೆ ಎಂದರೆ ಸಾಕ್ಷಿಯು ತುರ್ತಾಗಿ ಬೇಕಾಗಿರುವುದರಿಂದ ನಾಳೆ ಆಧಾರ್ ಕಾರ್ಡ ನ್ನು ಮೊಬೈಲ್ ಮೂಲಕ ನೀಡುವುದಾಗಿ ಹೇಳಿರುವುದಾಗಿ ನುಡಿಯುತ್ತಾರೆ. ಆರೋಪಿಯ ಮೊಬೈಲ್ ನಂಬರ್ ನನಗೆ ಗೊತ್ತಿಲ್ಲ. ಆರೋಪಿಯ ಮೊಬೈಲ್ ನಂಬರ್ ಅನ್ನು ನನ್ನ ಮೊಬೈಲ್ ನಲ್ಲಿ ಸೇವ್ ಮಾಡಿಕೊಂಡಿರುತ್ತೇನೆ ಹಾಗೂ ನನ್ನ ಮೊಬೈಲ್ ನಂಬರನ್ನು ಆರೋಪಿಗೆ ನೀಡಿರುತ್ತೇನೆ.  ಮೂರು ದಿನದ ನಂತರ ನನ್ನ  ಮೊಬೈಲ್ ಡಿಸ್ ಪ್ಲೇ ಹಾಳಾಗಿದ್ದ ಜಕಾರಣ ನಾನು ಫೋನ್ ಮಾಡಿರುವುದಿಲ್ಲ. ಆರೋಪಿಯೇ ಮಾಡಬಹುದೆಂದು ಎಂದು ಕಾಯುತ್ತಿದ್ದೆ.  ಆರೋಪಿಯ ದೂರವಾಣಿ ಕರೆ ಮಾಡದೇ ಇದ್ದಾಗ ನನ್ನ ಬಳಿ ಬೈಕ್ ಇದ್ದ ಕಾರಣ ಹಿರಿಯೂರಿಗೆ ಹುಡುಕಿಕೊಂಡು ಹೋಗಿರುವುದಿಲ್ಲ.  ಆರೋಪಿಯು 9 ನೇ ತಿಂಗಳಿನಲ್ಲಿ ಬೈಕನ್ನು ನನಗೆ ನೀಡಿದ್ದು, ದಿನಾಂಕ ಹೇಳಲು ನೆನಪಿಲ್ಲ.

ದಿನಾಂಕ 05.10.2025 ಎಂದು ಪೊಲೀಸರು ನನಗೆ ಬೈಕನ್ನು ಹಾಜರು ಪಡಿಸಲು ದೂರವಾಣಿ ಕರೆ ಮಾಡಿದ್ದರು. ನಾನು ಅದೇ ದಿನ ಬೈಕನ್ನು ಠಾಣೆಗೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ನಾನು ಠಾಣೆಗೆ ಬೈಕನ್ನು ಹಾಜರು ಪಡಿಸಿದಾಗ ಸಮಯ ಮದ್ಯಾಹ್ನ 12.00 ಗಂಟೆ ಆಗಿತ್ತು. ನಾನು ಠಾಣೆಗೆ ಬಂದಾಗ ಪೊಲೀಸರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿಯನ್ನು ಠಾಣೆಯಲ್ಲಿ ಮೊದಲನೆ ಬಾರಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ವಾಹನವನ್ನು ನೀಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಜೊತೆ ಷರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ